# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಡಾ: ತೇಜಸ್ವಿನಿ ಗೌಡ<br>(ವಿಧಾನ ಸಭಾ ಕ್ಷೇತ್ರ) |
| ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 107 |
| ಉತ್ತರಿಸಬೇಕಾದ ದಿನಾಂಕ | : | 16.02.2022 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಪಶುಸಂಗೋಪನೆ ಸಚಿವರು. |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕೇಂದ್ರ ಸರ್ಕಾರದ ಆಯವ್ಯಯದಲ್ಲಿ ಗ್ರೀನ್ ಫಾರ್ಮಿಂಗ್ (ಹಸಿರು ಕೃಷಿ) ಎಂಬ ನದಿ ಪಾತ್ರದ ಇಕ್ಕೆಲಗಳಲ್ಲಿ ಐದು ಕಿ.ಮೀ. ವ್ಯಾಪ್ತಿಯಲ್ಲಿ ಸಾವಯವ ಕೃಷಿ ಸಾಧನೆಗೆ ಯೋಜನೆ ಘೋಷಿಸಲಾಗಿದ್ದು, ಇದಕ್ಕಾಗಿ ಅಪಾರ ಪ್ರಮಾಣದ ದನದ ಗೊಬ್ಬರ ಬೇಕಾಗಿರುವುದನ್ನು ಸರ್ಕಾರ ಗಮನಿಸಿದೆಯೇ? | ಈ ಕುರಿತು ಈವರೆಗೂ ರಾಜ್ಯ ಸರ್ಕಾರಕ್ಕೆ ಯೋಜನೆಯ ವಿವರ ಬಂದಿರುವುದಿಲ್ಲ. |
| ಆ | ಈ ನಿಟ್ಟಿನಲ್ಲಿ ಹೆಚ್ಚಿನ ಪ್ರಮಾಣದ ಗೊಬ್ಬರ (ಸಾವಯವ) ಉತ್ಪಾದನೆಗೆ ಯಾವ ರೀತಿಯಲ್ಲಿ ಜಾನುವಾರುಗಳ ಸಂಖ್ಯೆಯನ್ನು ಹೆಚ್ಚಿಸುವ ಯೋಜನೆ ಇದೆ; | ಅನ್ವಯಿಸುವುದಿಲ್ಲ. |
| ಇ | ರಾಜ್ಯದಲ್ಲಿರುವ ಗೋಶಾಲೆಗಳು ಸುಗಮವಾಗಿ ನಡೆಯುತ್ತಿವೆಯೇ; ಎಷ್ಟು ಸಂಖ್ಯೆಯ ಗೋವುಗಳು ಈ ಆಶ್ರಮಗಳಲ್ಲಿವೆ; ಗೋವುಗಳಿಗೆ ಬೇಕಾದ ಆಹಾರ ಭದ್ರತೆಗಾಗಿ ಅಗತ್ಯವಿರುವ 'ಗೋಮಾಳ'ಗಳನ್ನು ಕಂದಾಯ ಇಲಾಖೆ ಸಂರಕ್ಷಿಸಿ ನೀಡಿದೆಯೇ? (ಈ ಬಗ್ಗೆ ಪಶುಸಂಗೋಪನಾ ಇಲಾಖೆಯಲ್ಲಿ ಲಭ್ಯವಿರುವ ಮಾಹಿತಿ ಒದಗಿಸುವುದು) | ರಾಜ್ಯದಲ್ಲಿ ಒಟ್ಟು 197 ಖಾಸಗಿ ಗೋಶಾಲೆಗಳಿದ್ದು, ಇವುಗಳು ಸುಗಮವಾಗಿ ನಡೆಯುತ್ತಿವೆ.<br><br>ಪ್ರಸ್ತುತ ಈ ಗೋಶಾಲೆಗಳಲ್ಲಿ ಒಟ್ಟು 35,418 ಜಾನುವಾರುಗಳಿವೆ.<br><br>ಗೋವುಗಳಿಗೆ ಬೇಕಾದ ಆಹಾರ ಭದ್ರತೆಗಾಗಿ ಅಗತ್ಯವಿರುವ ಗೋಮಾಳಗಳನ್ನು ಕಂದಾಯ ಇಲಾಖೆಯಿಂದ ಸಂರಕ್ಷಿಸಲಾಗುತ್ತಿದೆ. |

**ಪಸಂಮೀ ಇ-27 ಸಲೆವಿ 2021**

ಪ್ರಭು ಬಿ. ಚವ್ಹಾಣ್
ಪಶುಸಂಗೋಪನೆ ಸಚಿವರು.